1004(1487) ಶ್ರೀ ಪಾಟೀಲ್ ಡಿ.ಆರ್(ಗದಗ್) : ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಕಳೆದ ಮೂರು ವರ್ಷಗಳಲ್ಲಿ ರಾಜ್ಯ ಸರ್ಕಾರ ನೀಡಿರುವ ಪ್ರಶಸ್ತಿಗಳ ಸಂಖ್ಯೆ ಎಷ್ಟು;

ಆ) ನೀಡಿದ್ದಲ್ಲಿ ಕಂದಾಯ ವಿಭಾಗವಾರು ವಿತರಣೆಯಾಗಿರುವುದು ಹೇಗೆ :

ಇ) ಹಾಗೂ ಇದರಲ್ಲಿ ಪ್ರದೇಶವಾರು ತಾರತಮ್ಯವಾಗಿರುವುದೇ;

ಈ) ಹಾಗಿದ್ದಲ್ಲಿ, ತಾರತಮ್ಯ ನಿಲ್ಲಿಸಲು ಸರ್ಕಾರದ ಕ್ರಮಗಳೇನು;

ಉ) ರಾಜ್ಯದಲ್ಲಿ ಹೊಸ ಸರಕಾರ ಬಂದ ಮೇಲೆ ನೀಡಿರುವ ಪ್ರಶಸ್ತಿಗಳಲ್ಲಿ ಸಹ ತಾರತಮ್ಯವು ಮುಂದುವರೆದಿದೆಯೇ (ವಿಭಾಗವಾರು ವಿವರ ನೀಡುವುದು)?

ಶ್ರೀ ಧರ್ಮಸಿಂಗ್(ಮುಖ್ಯ ಮಂತ್ರಿಗಳು) :

ಅ) ರಾಜ್ಯೋತ್ಸವ ಪ್ರಶಸ್ತಿ – 228

ಆ) ವಿಶೇಷ ಪ್ರಶಸ್ತಿ – 33

ಆ) ವಿಶೇಷ ಪ್ರಶಸ್ತಿಗಳನ್ನು ಆಯ್ಕೆ ನಮಿತಿಗಳು ಆಯ್ಕೆ ಮಾಡುತ್ತೇವೆ ಹಾಗೂ ರಾಜ್ಯೋತ್ಸವ ಪ್ರಶಸ್ತಿಯನ್ನು ಸಲಹಾ ಸಮಿತಿಯು ಶಿಫಾರಸ್ಸು ಮಾಡಿದಂತೆ ನೀಡುವ ಪದ್ದತಿ ಅನುಸರಿಸಲಾಗುತ್ತದೆ. ಕಂದಾಯ ವಿಭಾಗವಾರುವಿನಂತೆ ಪ್ರಶಸ್ತಿಗಳನ್ನು ನೀಡುವ ವ್ಯವಸ್ಥೆ ಇರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಮೇಲೆ ಹೇಳಿದ ಕಾರಣಗಳಿಂದ ಅಂತಹ ಪ್ರಸಂಗ ಬರುವುದಿಲ್ಲ.

1005(792) ಶ್ರೀ ಪಾಟೀಲ್ ಎಸ್.ಎಸ್.(ಮುಂಡರಗಿ) ಮಾನ್ಯ ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಗದಗ ಜಿಲ್ಲೆ ಮುಂಡರಗಿ ಪಟ್ಟಣಕ್ಕೆ ಐ.ಡಿ.ಎಸ್.ಎಂ.ಟಿ ಯೋಜನೆಯಂತೆ ರೂ.1.00 ಕೋಟಿಗಳಲ್ಲಿ ರೂ.50.00ಲಕ್ಷಗಳು ಮಂಜೂರು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಉಳಿದ ರೂ.50.00 ಲಕ್ಷಗಳನ್ನು ಮಂಜೂರು ಮಾಡಲು ಕ್ರಮಗಳೇನು?

ಶ್ರೀ ಎಸ್.ಆರ್.ಮೋರೆ (ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ ಸಚಿವರು) :

ಅ) ಮುಂಡರಗಿ ಪಟ್ಟಣಕ್ಕೆ ಐ.ಡಿ.ಎಸ್.ಎಂ.ಟಿ ಯೋಜನೆಯಡಿ ರೂ.51.28 ಲಕ್ಷಗಳ ಯೋಜನಾ ವರದಿ ಕೇಂದ್ರ ಸರ್ಕಾರದಿಂದ ಮಂಜೂರಾಗಿರುತ್ತದೆ. ರೂ.48.72 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕಛೇರಿ ಕಟ್ಟಡವನ್ನು ನಿರ್ಮಾಣ ಮಾಡುವ ಪ್ರಸ್ತಾವನೆಯನ್ನು ಮಾರ್ಗಸೂಚಿಯನ್ವಯ ಅಸಾಧ್ಯವಾದುದರಿಂದ ಮಂಜೂರಾತಿ ನೀಡಿರುವುದಿಲ್ಲ.

ಆ) ಉಳಿದ ರೂ.48.72 ಲಕ್ಷ ಮಂಜೂರಾತಿಗಾಗಿ ಮುಂಡರಗಿ ಸ್ಥಳೀಯ ಸಂಸ್ಥೆಯು ಬೇರೆ ಕಾಮಗಾರಿಗೆ ಬದಲಾವಣೆ ಮಾಡಿ ಪರಿಷ್ಕೃತ ಪ್ರಸ್ತಾವನೆ ಕಳುಹಿಸಬೇಕಾಗಿರುತ್ತದೆ.